**Com.O.S.** 50/2022

**PW-1**

**ಸಾಕ್ಷಿಯನ್ನು ದಿನಾಂಕ 5.1.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎನ್.ಸಿ ವಕೀಲರಿಂದಃ**

ಮೃತ ಕಮಲಮ್ಮ ಇವರನ್ನು ನಾನು ವೈಯಕ್ತಿಕವಾಗಿ ನೋಡಿಲ್ಲ. ದಿನಾಂಕ 10.1.2019 ರಂದು ಕಮಲಮ್ಮ ಇವರು ನಮ್ಮ ಕಛೇರಿಗೆ ಮೊದಲ ಬಾರಿಗೆ ಬಂದಿದ್ದರು. ಅದೇ ಸಾಲದ ಹಣವನ್ನು ಪಾವತಿ ಮಾಡಿದ್ದೇವೆ. ಆ ದಿನ ಕಮಲಮ್ಮನವರ ಗಂಡ ಸಿದ್ದೇಗೌಡ, ಮೋಹನ್ ಹಾಗೂ ಮಹೇಶ ನಮ್ಮ ಕಛೇರಿಗೆ ಬಂದಿದ್ದರು. ಆದರೆ ಯಾವ ಸಮಯಕ್ಕೆ ಬಂದಿದ್ದರು ಎಂದು ಗೊತ್ತಿಲ್ಲ. ಅವರು ಎಷ್ಟು ಸಮಯದವರೆಗೆ ನಮ್ಮ ಕಛೇರಿಯಲ್ಲಿದ್ದರು ಎಂದು ಗೊತ್ತಿಲ್ಲ. ದಿನಾಂಕ 10.1.2019 ಕ್ಕಿಂತ ಮೊದಲು ಸಹ ಕಮಲಮ್ಮ ನಮ್ಮ ಕಛೇರಿಗೆ ಬಂದಿದ್ದಾರೆ, ಆದರೆ ದಿನಾಂಕ ನೆನಪಿಲ್ಲ. ಕಮಲಮ್ಮ ಇವರು ಸಾಯುವ ಮೊದಲು ಒಟ್ಟು ಎಷ್ಟು ಬಾರಿ ನಮ್ಮ ಕಛೇರಿಗೆ ಬಂದಿದ್ದರು ಎಂದು ಗೊತ್ತಿಲ್ಲ. ಸಾಲ ಬೇಕೆಂದು ಮೊದಲಿಗೆ ಮೋಹನ್ ಇವರು ಕೇಳಿದರು. ದಾವೆಯಲ್ಲಿ ಮೋಹನ್ ಇವರು ಹಣ ಕೇಳಿದ್ದ ಬಗ್ಗೆ ನಮೂದಿಲ್ಲ. ಮೋಹನ್ ಇವರ ವಿರುದ್ಧ ಚೆಕ್ ಬೌನ್ಸ ಕೇಸ್ ದಾಖಲಿಸಿದ್ದೇವೆ ಎಂದರೆ ನಿಜ. 19 ಲಕ್ಷ 21 ಸಾವಿರ ಚಿಲ್ಲರೆ ಹಣಕ್ಕೆ ಆ ಚೆಕ್ ಬೌನ್ಸ ಕೇಸ್ ದಾಖಲಿಸಿದ್ದೇವೆ. ಆ ಪ್ರಕರಣದಲ್ಲಿ ನಾನೇ ಪಿರ್ಯಾದಿದಾರ ಎಂದರೆ ನಿಜ. ಈ ಪ್ರಕರಣದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಆ ಚೆಕ್ ಬೌನ್ಸ ಕೇಸ್ ದಾಖಲಿಸಿದ್ದೇವೆ ಎಂದರೆ ನಿಜ. ಮೋಹನ್ ಇವರು ಹಣ ಕೇಳಲು ಬಂದಿದ್ದ ದಿನಾಂಕ ನೆನಪಿಲ್ಲ. 2019 ರ ಜನವರಿಯಲ್ಲಿ ಅವರು ಬಂದಿರಬಹುದು. ಆ ಕಾಲಕ್ಕೆ ಅವರ ಸ್ನೇಹಿತ ಮಹೇಶ ಸಹ ಬಂದಿದ್ದರು. ಕಮಲಮ್ಮ ಸಹ ಸಾಲದ ಅರ್ಜಿ ನೀಡಿ ಸಾಲ

ಕೇಳಿದ್ದರು. ಮೊದಲಿಗೆ ದಾಖಲೆಗಳನ್ನು ನೀಡಿ ನಂತರ ಸಾಲ ಕೊಟ್ಟ ದಿನವೇ ಅವರು ಸಾಲ ಕೇಳಿದ್ದರು. ಕಮಲಮ್ಮ ಇವರು ಯಾವುದೇ ಆಸ್ತಿ ಖರೀದಿಸಲು ಸಾಲ ಕೇಳಿದ್ದರು. ಸಾಕ್ಷಿ ಪುನಃ ಹೇಳುತ್ತಾರೆ ಮಗ ಆಸ್ತಿ ಖರೀದಿಸಲು ಸಾಲ ಬೇಕೆಂದು ಕೇಳಿದ್ದರು. ಆದರೆ ಎಲ್ಲಿ ಆಸ್ತಿ ಖರೀದಿ ಮಾಡುತ್ತಾನೆ ಎಂದು ಹೇಳಿಲ್ಲ. ಸಿದ್ದೇಗೌಡರು ಸಾಲ ಬೇಕೆಂದು ನಮ್ಮನ್ನು ಕೇಳಿಲ್ಲ. ಸಾಲದ ಅರ್ಜಿಯಲ್ಲಿ ಸಿದ್ದೇಗೌಡರ ಹೆಸರು ಸಹ ಇದೆ. ನಿಪಿ2 ರ 2 ನೇ ಪುಟದಲ್ಲಿ ಸಿದ್ದೇಗೌಡರ ಹೆಸರಿದೆ. ಸಾಲದ ಅರ್ಜಿ ಕೊಡುವ ದಿನ ಸಿದ್ದೇಗೌಡರು ನಮ್ಮ ಕಛೇರಿಗೆ ಬಂದಿದ್ದರು. ಬೇರೆ ಯಾವಾಗ ಬಂದಿದ್ದರು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಪ್ರತಿವಾದಿಗಳು ಯಾವ ಯಾವ ದಿನಾಂಕಗಳಂದು ನಮ್ಮ ಕಛೇರಿಗೆ ಬಂದಿದ್ದಾರೆ ಮತ್ತು ಯಾವ ಯಾವ ದಾಖಲೆಗಳಿಗೆ ಸಹಿ ಮಾಡಿದ್ದಾರೆ ಎಂದು ನನಗೆ ಖುದ್ದಾಗಿ ಮಾಹಿತಿ ಇದೆ. ದಿನಾಂಕ 10.1.2019 ರಂದು ಎಲ್ಲ ಪ್ರತಿವಾದಿಗಳು ನಮ್ಮ ಕಛೇರಿಗೆ ಬಂದಿದ್ದಾರೆ. ಅದನ್ನು ಬಿಟ್ಟು ಬೇರೆ ಯಾವತ್ತೂ ಅವರೆಲ್ಲರೂ ಒಟ್ಟಿಗೆ ಬಂದಿದ್ದರ ಬಗ್ಗೆ ಗೊತ್ತಿಲ್ಲ. ನಿಪಿ2, 3 ಮತ್ತು 5 ರ ದಾಖಲೆಗಳ ಬರವಣಿಗೆ ಕಾಲಕ್ಕೆ ನಾನು ಖುದ್ದು ಹಾಜರಿರಲಿಲ್ಲ. ದಿನಾಂಕ 10.1.2019 ರಂದೇ ನಿಪಿ2, 3 ಮತ್ತು 5 ದಾಖಲೆಗಳ ಬಗ್ಗೆ ನನಗೆ ಗೊತ್ತಾಯಿತು. ಅದನ್ನು ನಮ್ಮ ಕಛೇರಿಯಲ್ಲಿ ನನಗೆ ತಿಳಿಸಿದರು, ಆದರೆ ಯಾರೆಂದು ಹೇಳಲಾಗುವುದಿಲ್ಲ. ದಾಖಲಾತಿಗಳ ಬರವಣಿಗೆಯನ್ನು ನಮ್ಮ ಕಛೇರಿಯ ಗುಮಾಸ್ತರಾದ ಬಿ.ವಿ.ದೇವರಾಜು ಮಾಡಿರುತ್ತಾರೆ. ನಿಪಿ2, 3 ಮತ್ತು 5 ರಲ್ಲಿ ಬಿ.ವಿ.ದೇವರಾಜು ರವರು ಬರವಣಿಗೆ ಮಾಡಿದ ಬಗ್ಗೆ ನಮೂದಿಲ್ಲ ಎಂದರೆ ನಿಜ. ನಿಪಿ2, 3 ಮತ್ತು 5 ಕ್ಕೆ ಸಹಿ ಮಾಡಿದಾಗ ಪ್ರತಿವಾದಿಗಳು ಮತ್ತು ಕಮಲಮ್ಮ ಇವರನ್ನು ಹೊರತುಪಡಿಸಿ ಬೇರೆ ಯಾರು ಹಾಜರಿದ್ದರು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಬಿ.ವಿ.ದೇವರಾಜು ಇವರನ್ನು ಕೇಳಿಲ್ಲ. ಆ ರೀತಿ ಕೇಳಲು ತೊಂದರೆ ಇತ್ತಾ ಎಂದರೆ ಅಗತ್ಯ ಬರಲಿಲ್ಲವಾದ್ದರಿಂದ ಆ ಬಗ್ಗೆ ಕೇಳಿಲ್ಲ. ಸಾಲದ ಹಣವಾದ 14

ಲಕ್ಷಗಳನ್ನು ಚೆಕ್ ಮೂಲಕ ನೀಡಿದೆ. ಸಾಲದ ಹಣದ ಚೆಕ್ಕನ್ನು ಯಾರು ಯಾರಿಗೆ ಕೊಟ್ಟರು ಎಂದರೆ ನಮ್ಮ ಕಛೇರಿಯವರು ಸಾಲ ಕೇಳಿದವರಿಗೆ ನೀಡಿದ್ದಾರೆ, ಆದರೆ ಯಾರು ನೀಡಿದ್ದಾರೆ ಎಂದು ಗೊತ್ತಿಲ್ಲ. ನಮ್ಮ ಸಂಸ್ಥೆಯವರು ಪ್ರತಿವರ್ಷ ಆದಾಯ ತೆರಿಗೆ ರಿಟರ್ನ ಸಲ್ಲಿಸುತ್ತೇವೆ. ಬ್ಯಾಲೆನ್ಸ ಶೀಟಿನಲ್ಲಿ ಯಾರಿಗೆ ಸಾಲ ಕೊಟ್ಟಿದ್ದೇವೆಂದು ಪ್ರತಿಯೊಬ್ಬ ಸಾಲಗಾರರ ಹೆಸರನ್ನು ನಮೂದಿಸುವುದಿಲ್ಲ, ಒಟ್ಟು ಸಾಲದ ಮೊತ್ತವನ್ನು ನಮೂದಿಸುತ್ತೇವೆ. 2019 ರಲ್ಲಿ ಕಮಲಮ್ಮ ಇವರಿಗೆ ಹಣ ಪಾವತಿಸಿದ್ದಕ್ಕೆ ನಮ್ಮ ಕಛೇರಿಯ ಸ್ಟೇಟಮೆಂಟ್ ಆಫ್ ಅಕೌಂಟ್ ಹಾಜರುಪಡಿಸಿದ್ದೇವೆ. ಆದರೆ ನಮ್ಮ ಯಾವ ಬ್ಯಾಂಕಿನಿಂದ ಕಮಲಮ್ಮನವರ ಯಾವ ಬ್ಯಾಂಕ್ ಖಾತೆಗೆ ಹಣ ಪಾವತಿಯಾಗಿದೆ ಎಂದು ದಾಖಲೆ ಹಾಜರುಪಡಿಸಿಲ್ಲ. ಆ ರೀತಿ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ಕಮಲಮ್ಮ ಇವರಿಂದ ನಮ್ಮ ಸಂಸ್ಥೆಯ ಬ್ಯಾಂಕ್ ಖಾತೆಗೆ ಎಷ್ಟು ಹಣ ಪಾವತಿಯಾಗಿದೆ ಎಂಬ ಬಗ್ಗೆ ಬ್ಯಾಂಕ್ ಖಾತೆ ವಿವರಗಳನ್ನು ಹಾಜರುಪಡಿಸಿಲ್ಲ.

ಈ ವೇಳೆಗೆ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು